ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಮಿನಾಂಗಾರರಿಗೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ೧೯೮೫–೮೬ರ ವಾರ್ಷಿಕ ಕ್ರಿಯಾ ಯೋಜನಾನ್ವಯಂ ಯಾಂತ್ರಿಕ ದೋಣಿಗಳನ್ನು ಒದಗಿಸಂವ ನಿರ್ಧಾರದ ಬಗ್ಗೆ.

೪೫೬. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಮಿನಾಂಗಾರಿಕೆ ಹಾಗೂ ಬಂದರು ವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ೧೯೮೫–೮೬ರ ವಾರ್ಷಿಕ ಕ್ರಿಯಾ ಯೋಜನೆಯನ್ವಯ ಹರಿಜನ ಮಿನಾಂಗಾರರಿಗೆ ಎಷ್ಟು ಯಾಂತ್ರಿಕ ದೋಣಿಗಳನ್ನು ಒದಗಿಸಲು ನಿರ್ಧರಿಸಲಾಗಿದೆ ?

ಆ) ಈ ಯೋಜನೆಯಂತೆ ಎಷ್ಟು ದೋಣಿಗಳನ್ನು ಒದಗಿಸಲಾಗಿದೆ ?

ಇ) ಸದರೀ ಯೋಜನೆ ಪೂರ್ತಿಯಾಗಿ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು ?

ಶ್ರೀ ಸಿ. ಬೈರೇಗೌಡ (ಮಿನುಗಾರಿಕೆ ಮತ್ತು ಬಂದರು ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ೧೯೮೫–೮೬ರ ವಾರ್ಷಿಕ ಕ್ರಿಯಾ ಯೋಜನೆಯನ್ವಯ ಯಾಂತ್ರೀಕೃತ ದೋಣಿಗಳನ್ನು ಒದಗಿಸುವ ಕಾರ್ಯಕ್ರಮವಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹರಿಹರ ತಾಲ್ಲೂಕಿನಲ್ಲಿ ಮಲೇರಿಯಂ ಖಾಯಿಲೆ ಹರಡುತ್ತಿರುವುದು

೧೪೦೧. ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ). —ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕು ಕಡ್ಲೆಗೊಂದಿ ಗ್ರಾಮದಲ್ಲಿ ಮಲೇರಿಯಾ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹರಿಹರ ತಾಲ್ಲೂಕಿನ ಕಡ್ಲೆಗೊಂದಿ, ದೇವರ ಬಿಳ್ಳರೆ, ಕುಣಬಿಳಿಕೆರೆ ಗ್ರಾಮದಲ್ಲಿ ಹರಡಿದ್ದ ಮಲೇರಿಯಾ ಖಾಯಿಲೆ ಅಧ್ಯಯನ ಮಾಡಲು ದೆಹಲಿಯಿಂದ ತಜ್ಞರ ತಂಡ ಈ ಗ್ರಾಮಗಳಿಗೆ ಭೇಟಿ ನೀಡಿ ಕೊಟ್ಟ ಸಲಹೆಗಳನ್ನು ಸರ್ಕಾರದವರು ಕಾರ್ಯಗತ ಮಾಡಲು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) —

ಅ) ಬಂದಿದೆ

ಆ) ತಜ್ಞರ ತಂಡವು ಮಲೇರಿಯಾ ಕಾರ್ಯಕ್ರಮವನ್ನು ತೀವ್ರಗೊಳಿಸಂವ ಸಲುವಾಗಿ ಮಾಡಿದ ಸಲಹೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ.

ಚಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ವೃತ್ತಿ ನಾಟಕಗಳ ನಿಯಂತ್ರಣದ ಬಗ್ಗೆ

೧೫೭೩. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ). —ಮಾನ್ಯ ವಾರ್ತಾ, ಯುವ ಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?